# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ Deter ಸಮಿತಿ (Ward Deter Committee) ವಾರ್ಡ್ ಸಂಖ್ಯೆ 126–ಮಾರುತಿಮಂದಿರ ವಾರ್ಡಿನಲ್ಲಿ ದಿನಾಂಕ: 11-05-2021ರಂದು ನಡೆದ ಸಭೆಯ ನಡವಳಿಗಳು**

ವಿಷಯ:-ವಾರ್ಡ್ ನಂ. 126, ಮಾರುತಿಮಂದಿರ, ವಾರ್ಡ್ Deter ಸಮಿತಿ (WDC) ಸಭೆಯ ನಡವಳಿಗಳು.

ಉಲ್ಲೇಖ:1.ಕರ್ನಾಟಕ ಸರ್ಕಾರದ ಆದೇಶದ ಸಂಖ್ಯೆ ನಂ. RD 158 TNR 2020 ದಿನಾಂಕ: 07-05-2021

ಉಲ್ಲೇಖ (1)ರ ಸಭಾ ಸೂಚನಾ ಪತ್ರದ ಅನುಸಾರ ಆದೇಶದ ಅಂಶಗಳನ್ನು ಪರಿಶೀಲಿಸಲು ದಿನಾಂಕ: 11-05-2021 ರಂದು ಮಾರುತಿ ಮಂದಿರ, ವಾರ್ಡ್ ನಂ. 126, ಮಾರುತಿ ಮಂದಿರ ವಾರ್ಡ್ ಆಫೀಸ್, ಪಿ.ಎಫ್.ಲೇ ಔಟ್, 1ನೇ ಅಂತಸ್ತಿನಲ್ಲಿ ಬೆಳಿಗ್ಗೆ 11-00 ಗಂಟೆಗೆ ನಡೆದ ಸಭೆಯ ನಡವಳಿ.

**ಸಭೆಗೆ ಹಾಜರಿದ್ದವರು:**

1. ಶ್ರೀಮತಿ. ಎನ್.ಉಮಾ, ನೋಡಲ್ ಅಧಿಕಾರಿ, ಕಂದಾಯ ಅಧಿಕಾರಿ (ಗೋವಿಂದರಾಜನಗರ)
2. ಶ್ರೀ ರವಿರಾಜ್, ವಾರ್ಡ್ ಸಮಿತಿಯ ಕಾರ್ಯದರ್ಶಿ, ಸಹಾಯಕ ಅಭಿಯಂತರರು,
3. ಶ್ರೀ ಯಶವಂತ್ ರಾಜ್, ಸಹಾಯಕ ಕಂದಾಯ ಅಧಿಕಾರಿ (ಚಂದ್ರಬಡಾವಣೆ)ಉಪ ವಿಭಾಗ
4. ಡಾ: ಮಾಲತಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಸರಸ್ವತಿನಗರ, ವಾರ್ಡ್ ನಂ.126
5. ಬಿ.ಬಿ.ಎಂ.ಪಿ. ಇತರ ವಿಭಾಗದ ಅಧಿಕಾರಿಗಳು
6. ಕೆನರಾ ಬ್ಯಾಂಕ್ ಕಾಲೋನಿ, ವಿನಾಯಕ ಬಡಾವಣೆ, ಪಿ.ಎಫ್ ಲೇ ಔಟ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ರವರುಗಳು.
7. ವಾರ್ಡ್ ಸಮಿತಿಯ ಸದಸ್ಯರುಗಳು

ಸಭೆಯನ್ನು ಪ್ರಾರಂಭಿಸುತ್ತಾ, ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಕಂದಾಯ ಅಧಿಕಾರಿ (ಗೋವಿಂದರಾಜನಗರ) ಹಾಗೂ ಮಾರುತಿಮಂದಿರ ವಾರ್ಡ್ ನಂ. 126ರ ನೋಡಲ್ ಅಧಿಕಾರಿರವರು ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ (WDC(D) ವಾರ್ಡ್ ತಡೆ ಸಮಿತಿ ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರದ ರಚನೆ, ಸ್ವರೂಪ, ಕಾರ್ಯವಿಧಾನ ಅಗತ್ಯತೆ ಹಾಗೂ ಕೋವಿಡ್-19ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

1. ಹಿಂದಿನ ಸಭೆಯಲ್ಲಿ ನಿರ್ಣಯಗಳ ಅನುಪಾಲನೆ ಹಾಗೂ ಸಾರ್ವಜನಿಕರಿಗೆ ಸಮರ್ಪಕ ಸೇವೆ ನೀಡುವ ಬಗ್ಗೆ ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಅನುಪಾಲನೆ ಮತ್ತು

ವಾರ್ಡ್‌ನಲ್ಲಿ ಸಾರ್ವಜನಿಕರ ದಿನನಿತ್ಯ ಮೂಲಭೂತ ಸೌಕರ್ಯಗಳು ಹಾಗೂ ಸೇವೆ ಒದಗಿಸುವ ಸಂಬಂಧ ನಿರಂತರವಾಗಿ ಕ್ರಮವಿಡಲು ಹಾಜರಿದ್ದ ಎಲ್ಲಾ ಬಿ.ಬಿ.ಎಂ.ಪಿ. ಅಧಿಕಾರಿ ಸಿಬ್ಬಂದಿಯವರಿಗೆ ತಿಳಿಸಿದರು.

2. ಕೋವಿಡ್ 19 ನಿಯಂತ್ರಣ ಸಂಬಂಧ (Deter) Physical ಸಮಿತಿ ರಚನೆ ಹಾಗೂ ಈ ಕೆಳಕಂಡಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ

1) Physical Triaging ಹಾಗೂ ವಾರ್ಡ್ ರೂಂ ಸ್ಥಾಪನೆಗಾಗಿ ಸೂಕ್ತ ಕಟ್ಟಡ ಸ್ಥಳಾವಕಾಶ ಗುರುತಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ವಾರ್ಡ್ ನಂ. 126 ಮಾರುತಿ ಮಂದಿರದಲ್ಲಿ ಯೋಗಕೇಂದ್ರ, 6ನೇ ಅಡ್ಡರಸ್ತೆ, ಜಿ.ಕೆ.ಡಬ್ಲ್ಯೂ ಬಡಾವಣೆಯಲ್ಲಿ ಅಗತ್ಯ ಕೇಂದ್ರ ಸ್ಥಾಪಿಸುವ ಬಗ್ಗೆ ವಲಯ ಆಯುಕ್ತರು ಹಾಗೂ ಜಂಟಿ ಆಯುಕ್ತರು (ಪಶ್ಚಿಮ) ವಲಯ, ಬಿ.ಬಿ.ಎಂ.ಪಿ. ರವರಿಗೆ ಪತ್ರ ಬರೆಯಲು ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ತಿಳಿಸಲಾಯಿತು.

2) ಅಗತ್ಯವಿರುವ ಬ್ಯಾನರ್, ಪೋಸ್ಟರ್, ನಾಮಫಲಕ, ಸೂಚನಾಫಲಕ ಹಾಗೂ ಅಗತ್ಯ ಪ್ರಮುಖ ಸಾಮಾಗ್ರಿಗಳನ್ನು ಏರ್ಪಾಡು ಮಾಡಿಕೊಳ್ಳಲು ಕ್ರಮವಿಡಲು ಸಭೆಯಲ್ಲಿ ನಿರ್ಧರಿಸಲಾಯಿತು.

3) ವಾರ್ಡ್‌ನ ವಾರ್‌ರೂಮ್‌ಗೆ ಪ್ರತ್ಯೇಕ ಅಗತ್ಯವಿರುವ ಟೆಲಿಫೋನ್, ಕಾಲ್ ಸೆಂಟರ್ ಸೌಲಭ್ಯ ಒದಗಿಸಲು ವಲಯ ಜಂಟಿ ಆಯುಕ್ತರು (ಪಶ್ಚಿಮ) ವಲಯ ಕಛೇರಿಗೆ ಕೋರುವಂತೆ ವಾರ್ಡ್ ಕಾರ್ಯದರ್ಶಿಯವರಿಗೆ ಸಭೆಯಲ್ಲಿ ತಿಳಿಸಿ, ದೂರವಾಣಿ ಸಂಖ್ಯೆ ದೊರೆತ ಕೂಡಲೇ ತ್ವರಿತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

4) ವಾರ್ಡ್‌ವಾರು ಸ್ವಯಂ ಸೇವಕರನ್ನು ನಿಯಮಾನುಸಾರ ನೊಂದಾಯಿಸಿಕೊಳ್ಳವುದು. ವಾರ್ಡಿನಲ್ಲಿ ವೈದ್ಯರು ಪ್ಯಾರಾಮೆಡಿಕಲ್ ಸಿಬ್ಬಂದಿಯವರನ್ನು ಗುರುತಿಸಿ, ಅಗತ್ಯ ವಿವರ ಸಂಗ್ರಹಣೆ ಹಾಗೂ ಆರ್.ಡಬ್ಲ್ಯೂ.ಎ.ಗಳನ್ನು ಸೇರಿಸಿಕೊಂಡು ಸರ್ಕಾರಿ ಆದೇಶದ ಪ್ರಕಾರ ಕಾರ್ಯವಾರು ಗುಂಪು ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

5) ವಾರ್ಡ್ ಮಟ್ಟದ ಇಲಾಖಾ ಅಧಿಕಾರಿಗಳ ಕೋರ್‌ಗ್ರೂಪ್ , ಎನ್.ಜಿ.ಓ. ಹಾಗೂ ಸ್ವಯಂ ಸೇವಕರ ಗ್ರೂಪ್ ಮತ್ತು ಆಸ್ಪತ್ರೆ/ಹೋಮ ಐಸೋಲೇಷನ್ ಗಮನಿಸುವಿಕೆ, ವೈದ್ಯಕೀಯ/ಬಿ.ಎಲ್.ಓ. ಸಿಬ್ಬಂದಿಗಳ ವಾಟ್ಸ್ ಆಪ್ ಗ್ರೂಪ್‌ಗಳನ್ನು ರಚಿಸಿ, ಸಕ್ರಿಯಗೊಳಿಸಲು ತೀರ್ಮಾನಿಸಲಾಯಿತು.

6) ಬಿ.ಬಿ.ಎಂ.ಪಿ. ಕೇಂದ್ರ ಕಛೇರಿಯಿಂದ ನೀಡಲ್ಪಡುವ ಸೂಚನೆಗಳು ಹಾಗೂ ಮಾರ್ಗ ಸೂಚಿಗಳು, ಸರ್ಕಾರಿ ಆದೇಶಗಳು, ವಲಯ ಕಛೇರಿಯ ಆದೇಶ ಅನುಸಾರ, ಆದ್ಯತೆ ಮೇಲೆ ಕ್ರಮವಿಡಲು ತೀರ್ಮಾನಿಸಲಾಯಿತು.

7) ಆರೋಗ್ಯ ಪರಿವೀಕ್ಷಕರಿಗೆ ವಾರ್ಡಿನಲ್ಲಿರುವ ಆಸ್ಪತ್ರೆಗಳು ಹಾಗೂ ಕ್ಲಿನಿಕ್‌ಗಳ ಪಟ್ಟಿಯನ್ನು ಒದಗಿಸಲು ಸೂಚಿಸಲಾಯಿತು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Uma 11/5/...

| | |
|---|---|
| (ರವಿ ರಾಜ್) | (ಎನ್.ಉಮಾ) |
| ಕಾರ್ಯದರ್ಶಿಗಳು | ನೋಡಲ್ ಅಧಿಕಾರಿಗಳು |
| ವಾರ್ಡ್ ನಂ.126–ಮಾರುತಿಮಂದಿರ | ವಾರ್ಡ್ ನಂ.126 ಮಾರುತಿಮಂದಿರ |

ಪ್ರತಿಯನ್ನು:

1) ವಿಶೇಷ ಆಯುಕ್ತರು (ಆಡಳಿತ)ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪಶ್ಚಿಮ)ರವರ ಮಾಹಿತಿಗಾಗಿ ಮಂಡಿಸಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ
4) ಮಾನ್ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಕಡತಕ್ಕೆ.